ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸಾಲ ನೀಡುವುದು

23 ಶ್ರೀ ಆರ್.ಧ್ರುವನಾರಾಯಣ್

ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ ಸಹಕಾರ ಇಲಾಖೆಯ ಸಂಘ ಸಂಸ್ಥೆ ಮತ್ತು ಸೊಸೈಟಿ ಗಳಲ್ಲಿ ನೀಡಲಾಗುವ ಸಾಲಕ್ಕೆ ಕೇವಲ ಶೇ.3 ರಷ್ಟು ಮಾತ್ರ ಬಡ್ಡಿದರ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸಹಕಾರಿ ಪತ್ತಿನ ಸಂಸ್ಥೆಗಳು ರಾಜ್ಯದಲ್ಲಿ ರೈತರು ನೇಕಾರರು ಹಾಗು ಮೀನುಗಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ದಿನಾಂಕ:01–04–2008ರಿಂದ ಜಾರಿಗೊಳಿಸಲು ಮಂಜೂರಾತಿ ನೀಡಲಾಗಿದೆ.

ಆ ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ ದಿಂದ ನೀಡಲಾಗುವ ಸಾಲಕ್ಕೆ ವಿಧಿಸಲಾಗುತ್ತಿರುವ ಬಡ್ಡಿದರ ಎಷ್ಟು;

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಅಡಿ ನಡೆಯುವ ಸಾಲಕ್ಕೆ ಈ ಕೆಳಗಿನಂತೆ ಬಡ್ಡಿ ದರ ನಿಗದಿಪಡಿಸಲಾಗಿದೆ.

1) ಸ್ವಯಂ ಉದ್ಯೋಗ ಹಾಗೂ ಐ.ಎಸ್.ಬಿ. ಯೋಜನೆಯಡಿ ನೀಡುವ ಅಂಚಿನ ಸಾಲಕ್ಕೆ–ಶೇ.4.

2) ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮ ಇದರಿಂದ ಅವಧಿ ಸಾಲ ಪಡೆದು, ನೀಡುವ ಸಾಲಕ್ಕೆ ನಿಗದಿಪಡಿಸಿರುವ ಬಡ್ಡಿದರದ ವಿವರ ಈ ಕೆಳಗಿನಂತಿವೆ:–

- ನೇರಸಾಲ ಯೋಜನೆಯಡಿ ಅವಧಿಸಾಲಕ್ಕೆ ಶೇ.6
- ನೇರಸಾಲ ಯೋಜನೆಯಡಿ ನಿಗಮ ನೀಡುವ ಅಂಚಿನ ಹಣಕ್ಕೆ–ಶೇ.4.
- ಮಹಿಳಾ ಸಮೃದ್ಧಿ ಯೋಜನೆಯಡಿ ಅವಧಿಸಾಲಕ್ಕೆ–ಶೇ.4.
- ಮಹಿಳಾ ಕಿಸಾನ್ ಯೋಜನೆಯಡಿ ಅವಧಿ ಸಾಲಕ್ಕೆ–ಶೇ.5
- ಭೂ ಒಡತನ ಯೋಜನೆಯಡಿ ಅವಧಿ ಸಾಲಕ್ಕೆ–ಶೇ.6.
- ಮೈಕ್ರೋ ಕ್ರೆಡಿಟ್ ಯೋಜನೆಯಡಿ ಅವಧಿ ಸಾಲಕ್ಕೆ–ಶೇ.5.
- ಮೈಕ್ರೋ ಫೈನಾನ್ಸ್ (ಕಿರುಸಾಲ) ಯೋಜನೆಯಡಿ ನಿಗಮ ನೀಡುವ ಅಂಚಿನ ಹಣಕ್ಕೆ–ಶೇ.4.
- ಸುಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಇವರಿಂದ ಪಡೆದ ಅವಧಿ ಸಾಲಕ್ಕೆ–ಶೇ.6, ನಿಗಮ ನೀಡುವ ಅಂಚಿನ ಹಣಕ್ಕೆ–ಶೇ.4.

ಇ ಸಹಕಾರ ಸಂಘಗಳಲ್ಲಿರುವಂತೆ ಶೇ.3ರ ಬಡ್ಡಿದರವನ್ನು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಫಲಾನುಭವಿಗಳಿಗೂ ವಿಸ್ತರಿಸುವಲ್ಲಿ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದು.

24 ಶ್ರೀ ಆರ್.ಧ್ರುವನಾರಾಯಣ್

ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ ರಾಜ್ಯದ ವಿವಿಧ ಇಲಾಖೆ ಮತ್ತು ನಿಗಮಗಳಲ್ಲಿ ಪ್ರಸ್ತುತ ಗುರುತಿಸಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು;

18994

ಆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಪ್ರಗತಿ ಪರಿಶೀಲನೆಗಾಗಿ ಸಂಪುಟದ ಉಪಸಮಿತಿಯ ರಚನೆಯಾಗಿದೆಯೇ;

ಇಲ್ಲ

ಇ ಹಾಗಿದ್ದಲ್ಲಿ, ಆ ಉಪಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಯಾರು;

ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಹಾಗಿದ್ದಲ್ಲಿ, ಯಾವಾಗ ರಚನೆ ಮಾಡಲಾಗುವುದು?

ಸರ್ಕಾರದ ಪರಿಶೀಲನೆಯಲ್ಲಿದೆ.

25 ಶ್ರೀ ಆರ್.ಧ್ರುವನಾರಾಯಣ್ ಎಂ.ಎಲ್.ಎ.

ಪ್ರೊ.ಡಾ.ಮುಮ್ತಾಜ್ ಅಲಿ ಖಾನ್(ಹೆಚ್.ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ 2006-07, 2007-08 ಮತ್ತು 2008-09ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡಲಾದ ಒಟ್ಟು ಅನುದಾನ ಎಷ್ಟು?

ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವ ಅನುದಾನದ ವಿವರ ಇಂತಿದೆ:-

1.2006-07 – ರೂ.4800.00 ಲಕ್ಷಗಳು

2.2007-08 – ರೂ.5035.00 ಲಕ್ಷಗಳು

3.2008-09 – ರೂ.5120.00 ಲಕ್ಷಗಳು

ಆ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಪ್ರತಿ ರೈತನಿಗೆ ಕೊಳವೆ ಬಾವಿ ಕೊರೆಸಲು ನೀಡಲಾಗುವ ಅನುದಾನ ಎಷ್ಟು (ವಿವರ ನೀಡುವುದು)?

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪ್ರತಿ ರೈತನಿಗೆ ನೀಡಲಾಗುತ್ತಿರುವ ಅನುದಾನದ ಮೊತ್ತ